ಕರ್ನಾಟಕ ವಿಧಾನ ಪರಿಷತ್

ಮಾನ್ಯ ಸದಸ್ಯರ ಹೆಸರು	:ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:1648
ಉತ್ತರಿಸಬೇಕಾದ ದಿನಾಂಕ	:18.03.2026
ಉತ್ತರಿಸಬೇಕಾದ ಸಚಿವರು	:ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಹೊಗ್ಕಂ ಗ್ರಾಮ ಪಂಚಾಯತ್ ವ್ಯಾಪ್ತಿಯ ನೆಲ್ಲೂರು ಗ್ರಾಮದಲ್ಲಿ ಸುಮಾರು 40ಕ್ಕೂ ಹೆಚ್ಚು ದಲಿತ (ಆದಿ ಜಾಂಬವ) ಕುಟುಂಬಗಳು ಕಳೆದ 20 ವರ್ಷಗಳಿಂದ ವಸತಿ ರಹಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಈ ಪೈಕಿ ಎಷ್ಟು ಕುಟುಂಬಗಳು ಶಿಥಿಲಗೊಂಡಿರುವ ಮನೆಗಳಲ್ಲಿ ಅಥವಾ ಒಂದೇ ಮನೆಯಲ್ಲಿ 2-3 ಕುಟುಂಬಗಳು ವಾಸಿಸುತ್ತಿವೆ ಎಂಬ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ;	ಸಮೀಕ್ಷೆ ನಡೆಸಲಾಗಿದೆ, ಸುಮಾರು 29 ಕುಟುಂಬಗಳಿಗೆ ನಿವೇಶನ ಇರುವುದಿಲ್ಲ. ಗ್ರಾಮದಲ್ಲಿ ನಿವೇಶನಗಳ ಕೊರತೆಯಿಂದಾಗಿ ಜನರು ತಮಿಳುನಾಡಿಗೆ ವಲಸೆ ಹೋಗಿರುವುದಿಲ್ಲ, ಶಿಕ್ಷಣದಿಂದ ವಂಚಿತರಾಗಿರುವುದಿಲ್ಲ. ಈ ಭಾಗದಲ್ಲಿ ಪ್ರವಾಹದ ಭೀತಿ ಇರುವುದಿಲ್ಲ.
ಇ)	ಈ ಗ್ರಾಮದ ವಸತಿ ರಹಿತರಿಗಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಫಲಾನುಭವಿಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ; ಪಟ್ಟಿಯನ್ನು ಸಲ್ಲಿಸಿದ್ದರೆ, ಈವರೆಗೆ ಎಷ್ಟು ಮನೆಗಳು ಮಂಜೂರಾಗಿವೆ; ಮಂಜೂರಾಗದಿದ್ದಲ್ಲಿ ಅದಕ್ಕೆ ಕಾರಣಗಳೇನು;	
ಈ)	ಗ್ರಾಮದಲ್ಲಿ ನಿವೇಶನಗಳ ಕೊರತೆಯಿಂದಾಗಿ ಜನರು ತಮಿಳುನಾಡಿಗೆ ವಲಸೆ ಹೋಗುತ್ತಿರುವುದು ಮತ್ತು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಉ)	ಈ ಕುಟುಂಬಗಳಿಗೆ ಮಳೆಗಾಲದಲ್ಲಿ ಎದುರಾಗುವ ಪ್ರವಾಹದ ಭೀತಿಯನ್ನು ತಪ್ಪಿಸಲು ಸುರಕ್ಷಿತ ಜಾಗದಲ್ಲಿ ನಿವೇಶನ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	
ಊ)	ಕಳೆದ 5 ವರ್ಷಗಳಿಂದ ನಿರಂತರವಾಗಿ ಮನವಿ ನೀಡುತ್ತಿದ್ದರೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು; ಈ ಕೂಡಲೇ ಈ 40 ಕುಟುಂಬಗಳಿಗೆ ಮನೆ ನಿರ್ಮಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ನೆಲ್ಲೂರು ಭಾಗದ ಪರಿಶಿಷ್ಟ ಜನಾಂಗದ ಒಟ್ಟು ಕುಟುಂಬ 58 ಅದರಲ್ಲಿ 2010 ರಿಂದ ಇಲ್ಲಿಯವರೆಗೆ ವಿವಿಧ ಆಶ್ರಯ ಯೋಜನೆಯಡಿ ಸುಮಾರು 15 ಮನೆಗಳು ಪೂರ್ಣಗೊಂಡಿದ್ದು, ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಯೋಜನೆಯಡಿ 05 ಮನೆಗಳನ್ನು ನೀಡಿದ್ದು, ಅದರಲ್ಲಿ 04 ಪ್ರಗತಿಯಲ್ಲಿದ್ದ ಹಾಗೂ ಅದಕ್ಕೆ ಮೊದಲನೇ ಕಂತಿನ ಹಣ ಸಹ ಮಂಜೂರಾಗಿರುತ್ತದೆ. 01 ಮನೆ ಪ್ರಾರಂಭಿಸಿರುವುದಿಲ್ಲವೆಂದು ನಿವೇಶನ ರಹಿತರಿಗೆ ನಿವೇಶನವನ್ನು ನೀಡಲು ಕ್ರಮವಹಿಸಲಾಗುತ್ತಿರುವುದಾಗಿ ಮುಖ್ಯ ಯೋಜನಾಧಿಕಾರಿಗಳು ಹಾಗೂ ಜಿಲ್ಲಾ ವಸತಿ ನೋಡಲ್ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ ಜಿಲ್ಲೆ ಇವರು ಪತ್ರ ದಿನಾಂಕ: 10.03.2026ರಲ್ಲಿ ವರದಿ ಮಾಡಿರುತ್ತಾರೆ.

ಸಂಖ್ಯೆ:ವಇ 117 ಹೆಚ್‌ಎಎಂ 2026

(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು